**ದಿನಾಂಕ: 15.09.2023 ರಂದು ಸಾಕ್ಷಿ ಹಾಜರಿದ್ದು ಪ್ರಮಾಣಿಸಲಾಯಿತು.**

ಈ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹಿತ ದೃಷ್ಟಿಯಿಂದ ಮತ್ತು ವಾದಿ ಮತ್ತು ಪ್ರತಿವಾದಿ ಪರ ವಕೀಲರ ಹಿತ ದೃಷ್ಟಿಯಿಂದ, ಸಾಕ್ಷಿ ತಾನು ಯಾವ ರೀತಿ ಹೇಳಿಕೆ ನೀಡಿರುತ್ತಾರೆ ಎನ್ನುವುದನ್ನು ಪರಿಶೀಲಿಸಲು ಮತ್ತು ನಾನು ಈ ರೀತಿ ಹೇಳಿಕೆ ನೀಡಿಲ್ಲ ಎನ್ನುವುದನ್ನು ತಪ್ಪಿಸುವುದಕ್ಕಾಗಿ ಎರಡೂ ಬದಿಯಲ್ಲಿ ನೋಡಿಕೊಳ್ಳಲು ಎರಡೂ ಕಂಪ್ಯೂಟರ್ ಸ್ಕ್ರೀನ್ ಗಳನ್ನು ಅಳವಡಿಸಲಾಗಿದೆ.

**ಪಾಟೀ ಸವಾಲು:- 1 ನೇ ಪ್ರತಿವಾದಿ ಪರ ಶ್ರೀ ಎಸ್ ಎಲ್ ಎನ್ ಆರ್ ವಕೀಲರಿಂದ :-**

ಪ್ರಮಾಣ ಪತ್ರದಲ್ಲಿ ಹೇಳಿದ ವಿಳಾಸದಲ್ಲಿ ಸುಮಾರು 2002 ರಿಂದ ವಾಸವಿರುತ್ತೇನೆ. ಜಕ್ಕೂರೂ ಮುಖ್ಯರಸ್ತೆಗೆ ಕೆ ವಿ ಜಯರಾಂ ರೋಡ್ ಎಂದು ಇತ್ತೀಚೆಗೆ ಕರೆಯುತ್ತಾರೆ ಎಂದರೆ ನಿಜ. ರಸ್ತೆಯ ದಕ್ಷಿಣಕ್ಕೆ ಪ್ರತಿವಾದಿಯವರ ಅಪಾರ್ಟಮೆಂಟ್ ಇರುತ್ತದೆ ಎಂದರೆ ಸರಿಯಲ್ಲ. ಅದರೆ ಶೆಡ್ಯೂಲ್ ಸ್ವತ್ತು ಮತ್ತು ನಿವೇಶನೆ ಸಂ. 510 ಇರುತ್ತದೆ. ಪ್ರತಿವಾದಿಯವರು 2010 ರಲ್ಲಿ ಅಪಾರ್ಟಮೆಂಟ್ ನಿರ್ಮಿಸಿರುತ್ತಾರೆ. ಜಕ್ಕೂರು ರಸ್ತೆಯ ದಕ್ಷಿಣ ದಿಕ್ಕಿನ ಮುಖಾಂತರ ಪ್ರತಿವಾದಿಯವರು ತಮ್ಮ ಅಪಾರ್ಟಮೆಂಟ್‌ಗೆ ಹೋಗುತ್ತಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲಿ ರಸ್ತೆ ಇರುವುದಿಲ್ಲ. ಅವರು ಯಾವ ದಿಕ್ಕಿನ ಮುಖಾಂತರ ತಮ್ಮ ಅಪಾರ್ಟಮೆಂಟ್ ಗೆ ಹೋಗುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿದಾರರು 11/1 ಬ್ಯಾಟರಾಯನ ಪುರ ಸ್ವತ್ತಿನ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ರಸ್ತೆಯ ಮುಖಾಂತರ ತಮ್ಮ ಅಪಾರ್ಟಮೆಂಟ್‌ಗೆ ಹೋಗುತ್ತಾರೆ.

2. ಸದರಿ ಪೂರ್ವಕ್ಕೆ ಮತ್ತು ದಕ್ಷಿಣಕ್ಕಿರುವ ಸದರಿ ರಸ್ತೆ ಜಕ್ಕೂರಿನ ಮೈನ್ ರಸ್ತೆಯ ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯ ಅಪಾರ್ಟಮೆಂಟ್‌ನ ದಕ್ಷಿಣಕ್ಕೆ ಅಮರ್ ಕನ್ವೆಕ್ಷನ್ ಹಾಲ್ ಇರುತ್ತದೆ. ಅಪಾರ್ಟಮೆಂಟ್‌ನ ಪೂರ್ವಕ್ಕೆ

ಸಂಚಾರಿ ಪೋಲೀಸ್ ಠಾಣೆಗೆ ಹಂಚಿಕೆಯಾದ ನಿವೇಶನೆ ಇರುತ್ತದೆ ಎಂದರೆ ಸರಿಯಲ್ಲ. ಕನ್ವೆಕ್ಷನ್ ಹಾಲ್ ಪೂರ್ವಕ್ಕೆ ಬೆಸ್ಕಾಂ ರವರು ಟ್ರಾನ್ಸ್ ಫಾರ್ಮರ್ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ಬೆಸ್ಕಾಂ ಟ್ರಾನ್ಸ್ ಫಾರ್ಮರ್ ಅಪಾರ್ಟಮೆಂಟ್‌ನ ಜಾಗದಲ್ಲಿರುತ್ತದೆ.

3. ದಾವಾ ಸ್ವತ್ತಿನ ಮೂರು ಬದಿಗೆ ರಸ್ತೆ ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿದಾರರು ಎರಡು ಬದಿಯಲ್ಲಿ ರಸ್ತೆ ಇರುತ್ತದೆ ಎಂದು ಹೇಳುತ್ತಾರೆ. ನಿಪಿ-1 ದಿ. 22.10.1979 ರಲ್ಲಿ ಜಿ ಶಾಂತ ರವರು ವೆಂಕಟೇಶ್ ರವರ ಹೆಂಡತಿ ಎಂದು ಬರೆಯಲಾಗಿದೆ ಎಂದರೆ ನಿಜ. ಜಿ ಶಾಂತರವರಿಗೆ ದಿ. 22.10.1979 ರಂದು ಎಷ್ಟು ವರ್ಷ ವಯಸ್ಸಾಗಿತ್ತು ಎನ್ನುವುದು ಗೊತ್ತಿಲ್ಲ. ನಿಪಿ-1 ರಲ್ಲಿ ಸ್ವತ್ತಿನ ಮೂರು ದಿಕ್ಕಿನಲ್ಲಿ ರಸ್ತೆ ಇರುತ್ತದೆ ಎಂದು ಬರೆಯಲಾಗಿದೆ ಎಂದರೆ ನಿಜ. ಆ ರೀತಿ ಮೊದಲು ಇತ್ತು. ಖರೀದಿ ಮಾಡುವ ಸಮಯದಲ್ಲಿ ಅಂದರೆ 2015 ರಲ್ಲಿ ದಾವಾ ಸ್ವತ್ತಿನ ಮೂರು ದಿಕ್ಕಿನಲ್ಲಿ ರಸ್ತೆಗಳು ಇದ್ದವು ಎಂದರೆ ನಿಜ. ಸಾಕ್ಷಿ ಹೇಳುವುದೇನೆಂದರೆ ಪೂರ್ವದ ಕಡೆ ಇರುವ ರಸ್ತೆಯನ್ನು ಬಂದ್ ಮಾಡಿರುತ್ತಾರೆ. ಖರೀದಿ ಪತ್ರದ ಸಮಯದಂದು ಪೂರ್ವದ ಕಡೆ ರಸ್ತೆ ಬಂದ್ ಮಾಡಲಾಗಿದೆ ಅದಕ್ಕೆ ದುರಸ್ತಿ ಹಕ್ಕು ಪತ್ರ ಕೊಡಿ ಎಂದು ಶಾಂತ ಅವರನ್ನು ಕೇಳಿಕೊಂಡಿರಲಿಲ್ಲ ಏಕೆಂದರೆ ಅದು ಸರಿ ಇತ್ತು.

4. ದಾವಾ ಸ್ವತ್ತು ಬಿ ಬಿ ಎಂ ಪಿ ಅಧಿಕಾರ ವ್ಯಾಪ್ತಿಯಲ್ಲಿ ಬರುವುದರಿಂದ ಜಕ್ಕೂರಿನ ಎಲ್ಲಾ ಅಡ್ಡ ರಸ್ತೆಗಳಿಗೆ 1 ರಿಂದ 21 ಎಂದು ನಾಮ ಫಲಕ ನೀಡಿರುತ್ತಾರೆ ಎಂದರೆ ನಿಜ. ಅಪಾರ್ಟಮೆಂಟ್‌ನ ಪೂರ್ವಕ್ಕೆ ಸಂಚಾರ ಪೋಲೀಸರಿಗೆ ಸೇರಿದ ನಿವೇಶನೆ ಇರುವುದಿಲ್ಲ ಆದರೆ ಬ್ಯಾಟರಾಯನ ಪುರ ಸರ್ವೆ ನಂ. ಆಸ್ತಿ ಇರುತ್ತದೆ. ಸದರಿ ಬ್ಯಾಟರಾಯನ ಪುರ ಸರ್ವೆ ನಂ.ನ ಪೂರ್ವಕ್ಕೆ 19 ನೇ ಅಡ್ಡರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

**(1 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದು ಪಾಟೀ ಸವಾಲನ್ನು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ದಾಖಲಿಸಿಕೊಳ್ಳಲಾಗಿದೆ.)

ಓ ಹೇ ಕೇ ಸರಿ ಇದೆ.

(ಲಕ್ಷ್ಮಣ ರಾಮು ಕುರಣೆ )
15 ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.